MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 24-2-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಆಂಧ್ರಪ್ರದೇಶದ ಪಲಸಾ, ಶ್ರೀಕಾಕುಲಂ ಜಿಲ್ಲೆಗಳಲ್ಲಿ ದೇಶೀ ಕಚ್ಚಾ ಗೋಡಂಬಿ ಅಭಾವ

ಆಂಧ್ರಪ್ರದೇಶದ ಪಲಸಾ, ಶ್ರೀಕಾಕುಲಂ ಜಿಲ್ಲೆಗಳಲ್ಲಿ ದೇಶೀ ಕಚ್ಚಾ ಗೋಡಂಬಿ ಉತ್ಪಾದನೆ ಸ್ವಲ್ಪ ಹೆಚ್ಚಳವಿದ್ದರೂ ಒಟ್ಟು ಗೋಡಂಬಿ ತಿರುಳು ಉತ್ಪಾದನೆಗೆ ಸಾಕಾಗುತ್ತಿಲ್ಲವೆನ್ನಲಾಗಿದೆ. ಅಧಿಕ ಉತ್ಪಾದನಾ ಬೇಡಿಕೆ ಪೂರೈಸಲು ಆಮದು ಕಚ್ಚಾ ಗೋಡಂಬಿಯನ್ನು ಅವಲಂಬಿಸಬೇಕಾಗಿದೆಯೆನ್ನಲಾಗಿದೆ. ಫಸಲು ಇಳಿಕೆಯಿಂದ ಗೋಡಂಬಿ ತಿರುಳು ಉತ್ಪಾದನೆಗೆ ಕಚ್ಚಾ ಗೋಡಂಬಿ ಆಮದು ಮಾಡಬೇಕಾಗಿದೆಯೆನ್ನಲಾಗಿದೆ.

## ಭಾರತದ ಸಕ್ಕರೆ ಉತ್ಪಾದನೆ ಫೆಬ್ರವರಿ 15 ರ ತನಕ 22.8 ಮಿಲಿಯನ್ ಟನ್‌ಗಳು

ಈ ವರ್ಷ ಫೆಬ್ರವರಿ 15 ರ ತನಕ ಭಾರತದ ಸಕ್ಕರೆ ಕಾರ್ಖಾನೆಗಳು 22.8 ಮಿಲಿಯನ್ ಟನ್ ಸಕ್ಕರೆ ಉತ್ಪಾದನೆ ಮಾಡಿವೆಯೆನ್ನಲಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 22.2 ಮಿಲಿಯನ್ ಟನ್ ಸಕ್ಕರೆ ಉತ್ಪಾದಿಸಲಾಗಿತ್ತೆನ್ನಲಾಗಿದೆ. ಈ ವರ್ಷ ಹಿಂದಿನ ವರ್ಷಕ್ಕಿಂತ 37 ಶೇಕಡಾ ಹೆಚ್ಚಳ ಇಥೆನಾಲ್ ಉತ್ಪಾದನೆಗೆ ಬಳಸಲಾಗಿದೆಯೆನ್ನಲಾಗಿದ್ದು 25.8 ಲಕ್ಷ ಟನ್ ಇಥೆನಾಲ್ ಬಳಕೆಯಾಗಿದೆಯೆನ್ನಲಾಗಿದೆ.

## ನೀರುಳ್ಳಿ ದರ 4 ವರ್ಷಗಳ ಕನಿಷ್ಠ ಮಟ್ಟಕ್ಕಿಳಿಕೆ

ಪ್ರಮುಖ ನೀರುಳ್ಳಿ ಮಾರುಕಟ್ಟೆಯಾದ ನಾಸಿಕ್‌ನಲ್ಲಿ ನೀರುಳ್ಳಿ ದರ ತೀವ್ರ ಕುಸಿತವಾಗಿದ್ದು ದರ ಹಿಂದಿನ 4 ವರ್ಷಗಳ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ. ಮಧ್ಯಪ್ರದೇಶ, ಗುಜರಾರ್ ಮತ್ತು ರಾಜಸ್ಥಾನಗಳಂತಹ ಇತರ ರಾಜ್ಯಗಲಿಂದ ನೀರುಳ್ಳಿ ಆವಕ ಹೆಚ್ಚಳವಾದುದರಿಂದ ದರ ಕುಸಿತವಾಗಿದೆಯೆನ್ನಲಾಗಿದೆ. ಸಾಮಾನ್ಯವಾಗಿ ಈ ರಾಜ್ಯಗಳಲ್ಲಿ ನೀರುಳ್ಳಿ ಬೆಳೆಸುತ್ತಿದ್ದುದು ಕಡಿಮೆ. ಈ ವರ್ಷ ಮಹಾರಾಷ್ಟ , ಕರ್ನಾಟಕ ಸೇರಿಸಿ ಸಾಂಪ್ರದಾಯಿಕ ಉತ್ಪಾದನ ರಾಜ್ಯಗಳ ಉತ್ಪಾದನೆಯೊಂದಿಗೆ ಇತರ ರಾಜ್ಯಗಳ ಉತ್ಪಾದನೆಯೂ ಸೇರಿ ಖಾರೀಫ್ ಬೆಳೆಯ ಉತ್ಪಾದನೆ ಅಧಿಕವಾಗಿ ಪೂರೈಕೆ ಹೆಚ್ಚಳವಾಗಿದೆಯೆನ್ನಲಾಗಿದೆ.